# ರಾಹು ಸೇನೆ ಹಸಿದವರ ಪಾಲಿಗೆ ಅಕ್ಷಯಪಾತ್ರೆ



ಹಸಿವಿನ ವಿರುದ್ಧ ಯುದ್ಧ ಮಾಡಲು ಆರಂಭಗೊಂಡಿರುವ 'ರಾಬಿನ್ ಹುಡ್ ಆರ್ಮಿ', ಯಾರೊಬ್ಬರೂ ಹಸಿದ ಹೊಟ್ಟೆಯಲ್ಲಿ ಮಲಗಬಾರದೆಂಬ ಆಶಯದೊಂದಿಗೆ ಸೇವೆ ಮಾಡುತ್ತಿದೆ.

■ ಗುರುರಾಜ ಎಸ್‌. ದಾವಣಗೆರೆ

ನಮಗೆ ಭಾರತೀಯ ಸೇನೆ, ಅಮೆರಿಕದ ಆರ್ಮಿ ಬಗ್ಗೆ ಗೊತ್ತಿದೆ. ಆಫ್ರಿಕಾದ ಕೆಲವು ಭಾಗಗಳ ಗೆರಿಲ್ಲಾ ಆರ್ಮಿ ಬಗ್ಗೆಯೂ ತಿಳಿದಿದೆ. ಯುದ್ಧ, ಪ್ರವಾಹ, ಸುರಂಗ, ಕಟ್ಟಡ ಕುಸಿತ, ತೆರೆದ ಕೊಳವೆ ಬಾವಿಗಳಿಗೆ ಬಿದ್ದವರ ರಕ್ಷಣೆ, ಬೆಂಕಿ ಅಪಘಾತ, ಬಿರುಗಾಳಿ, ಮಳೆ, ಜಲಪ್ರಳಯ, ಭೂಕುಸಿತ ಮತ್ತು ಸುನಾಮಿಯಂಥ ಅವಘಡಗಳು ಸಂಭವಿಸಿದ ಸಂದರ್ಭಗಳಲ್ಲಿ ಈ ಸೇನೆಗಳು ಜನರ ನೆರವಿಗೆ ಬರುವುದನ್ನು ಕಂಡಿದ್ದೇವೆ.

ಆದರೆ ಇಲ್ಲೊಂದು ಸೇನೆ ಹೊಸ ಚಿಂತನೆಯ ತಳಹದಿಯ ಮೇಲೆ ರೂಪಿತಗೊಂಡಿದ್ದು, ಹಸಿವಿನ ವಿರುದ್ಧ ಯುದ್ಧ ಮಾಡುತ್ತಿದೆ. ಹಸಿದವರ ಹೊಟ್ಟೆ ತುಂಬಿಸುವುದೆಂದರೆ ಇದಕ್ಕೆ ಇನ್ನಿಲ್ಲದ ಉತ್ಸಾಹ, ಆಸಕ್ತಿ. ಯುದ್ಧವನ್ನು ಬಿಟ್ಟು ಇನ್ನೆಲ್ಲ ಕೆಲಸ ಮಾಡುವ ಈ ಆರ್ಮಿಯು ಜಗತ್ತಿನ ಯಾರೊಬ್ಬರೂ ಖಾಲಿ ಹೊಟ್ಟೆಯಲ್ಲಿ ಮಲಗಬಾರದು ಎಂಬ ಆಶಯದೊಂದಿಗೆ, ಸ್ವಯಂ ಸೇವಾ ಸಂಘಟನೆ ರೂಪದಲ್ಲಿ ಭಾರತದ ಎಲ್ಲ ರಾಜ್ಯಗಳಲ್ಲೂ ತನ್ನ ಕೆಲಸ ಪ್ರಾರಂಭಿಸಿದೆ.

ಸಮಾಜದ ಅಶಕ್ತ ಜನಸಮುದಾಯದ ಹಸಿವನ್ನು ನೀಗಿಸುತ್ತಿರುವ ಈ ಸಂಸ್ಥೆಯ ಹೆಸರು 'ರಾಬಿನ್ ಹುಡ್ ಆರ್ಮಿ'. ಪೋರ್ಚುಗಲ್ ದೇಶದ 'ರೀಫುಡ್ ಇಂಟರ್‌ನ್ಯಾಷನಲ್' ಜನಸೇವಾ ಸಂಸ್ಥೆಯ ಕೆಲಸದಿಂದ ಸ್ಫೂರ್ತಿಗೊಂಡು ರಾಬಿನ್ ಹುಡ್ ಆರ್ಮಿ ನಮ್ಮಲ್ಲಿ ಶುರುವಾಗಿದೆ.

ರಾಬಿನ್ ಹುಡ್ ಹೆಸರು ಕೇಳಿದಾಕ್ಷಣ ಶ್ರೀಮಂತರ ಸಂಪತ್ತನ್ನು ದೋಚಿ ಬಡವರಿಗೆ ಹಂಚುತ್ತಿದ್ದ ಬಡವರ ಬಂಧುವಿನ ನೆನಪಾಗುತ್ತದೆ. ಆಂಗ್ಲ ಜಾನಪದದ ಪ್ರಖ್ಯಾತ ಕಥಾನಾಯಕ ರಾಬಿನ್ ಹುಡ್‌ನ ಸಾಹಸಗಳು ಎಳೆಯರಿಂದ ಹಿಡಿದು ಹಿರಿಯರವರೆಗೂ ಅಚ್ಚುಮೆಚ್ಚು. ಕತ್ತಿ ವರಸೆ ಮತ್ತು ಬಿಲ್ವಿದ್ಯೆಗಳ ಪ್ರವೀಣನಾಗಿದ್ದ ರಾಬಿನ್‌ನ ರೋಚಕ ಕಥೆಗಳು ಅನ್ಯಾಯದ ಸಂಪತ್ತು ಗಳಿಕೆಯ ವಿರುದ್ಧದ ಹೋರಾಟಗಳೆಂದೇ ಓದುಗರ ನೆನಪಿನಲ್ಲಿ ಇಂದಿಗೂ ಹಸಿರಾಗಿದೆ.

ಹಾಗೇ ದೆಹಲಿಯ ನೀಲ್ ಘೋಷ್ ಮತ್ತು ಸಂಗಡಿಗರು ಪ್ರಾರಂಭಿಸಿದ 'ರಾಬಿನ್ ಹುಡ್ ಆರ್ಮಿ' ಹಸಿದವರ ಹೊಟ್ಟೆ ತುಂಬಿಸುವ ಕೆಲಸ ಮಾಡುತ್ತಿದೆ.

ಪೋರ್ಚುಗಲ್‌ನಲ್ಲಿ ಜೊಮ್ಯಾಟೊ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ನೀಲ್, 'ವಿಶ್ವದ ಪ್ರತಿ ಎಂಟು ಜನರಲ್ಲಿ ಒಬ್ಬ ವ್ಯಕ್ತಿಯು ರಾತ್ರಿಯ ಊಟವಿಲ್ಲದೆ ಮಲಗುತ್ತಾನೆ. ಜಗತ್ತಿನಲ್ಲಿ ಆಹಾರದ ಕೊರತೆ ಇಲ್ಲ, ಆದರೆ ಎಲ್ಲರಿಗೂ ಅದನ್ನು ಸಿಗುವಂತೆ ಮಾಡಲು ಸರಿಯಾದ ವ್ಯವಸ್ಥೆಗಳು ಇಲ್ಲ, ಇದು ಕೊನೆಗೊಳ್ಳಬೇಕು' ಎನ್ನುತ್ತಾರೆ.

ಮಾರಣಾಂತಿಕ ಏಡ್ಸ್ ಕಾಯಿಲೆ, ಭಯೋತ್ಪಾದನೆ, ಮಲೇರಿಯಾ ಕಾಯಿಲೆಗಳಿಂದ ಸಾಯುವವರ ಸಂಖ್ಯೆಗಿಂತ ಆಹಾರ ದೊರಕದೆ ಹಸಿವಿನಿಂದ ಸಾಯುವವರ ಸಂಖ್ಯೆ ವಿಶ್ವದಲ್ಲಿ ಹೆಚ್ಚಿದೆ. ಪ್ರತಿ 10 ಸೆಕೆಂಡಿಗೆ ಒಂದು ಮಗು ಆಹಾರ ಸಿಗದೇ ಅಸುನೀಗುತ್ತದೆ ಎಂಬ ಮಾಹಿತಿ ಇದೆ. ಹಸಿವಿನಿಂದ ಬಳಲುವ ಶೇ. 82ರಷ್ಟು ಜನ ಆಹಾರ ಉತ್ಪಾದನೆ ಅಧಿಕವಾಗಿರುವ ದೇಶಗಳಲ್ಲೇ ಇದ್ದಾರೆ. ಜಗತ್ತಿನಲ್ಲಿ ಉತ್ಪಾದನೆಯಾಗುತ್ತಿರುವ ಒಟ್ಟು ಆಹಾರದ ಮೂರನೇ ಒಂದು ಭಾಗ ಎಲ್ಲೂ ಬಳಕೆಯಾಗದೆ ಹಾಳಾಗುತ್ತಿರುವುದು ಪರಿಸ್ಥಿತಿಯ ವ್ಯಂಗ್ಯವೇ ಸರಿ.

ರಾಹು ಆರ್ಮಿಯು ಸ್ವಯಂಸೇವಾ ಸಂಘಟನೆಯಾಗಿದ್ದು, ಯಾರಿಂದಲೂ ಹಣ ಬೇಡುವುದಿಲ್ಲ. ಹೋಟೆಲ್, ಅಡುಗೆಮನೆ, ಕಲ್ಯಾಣ ಮಂಟಪಗಳಲ್ಲಿ ಉಳಿದ ಹೆಚ್ಚುವರಿ ಆಹಾರ ಪಡೆದುಕೊಂಡು ಹಸಿದವರಿಗೆ ನೀಡುವ ಕೆಲಸ ಮಾಡುತ್ತಿದೆ. ಈ ಸಂಘಟನೆ ಭಾರತದಲ್ಲಷ್ಟೇ ಅಲ್ಲದೆ ವಿದೇಶಗಳಲ್ಲೂ ತನ್ನ ಕೆಲಸ ಪ್ರಾರಂಭಿಸಿದೆ.

ಊಟ ಒದಗಿಸುವುದಷ್ಟೇ ಅಲ್ಲ, ಹಿರಿಯ ನಾಗರಿಕರಿಗೆ ಉಚಿತ ಔಷಧ ನೆರವು, ಕೊಳೆಗೇರಿಯ ಮಕ್ಕಳ ವಿದ್ಯಾಭ್ಯಾಸದ ಏರ್ಪಾಡನ್ನು ಆರ್ಮಿ ಮಾಡುತ್ತಿದೆ. ಸಾಫ್ಟ್‌ವೇರ್ ಡೆವಲಪರ್, ಮಾರ್ಕೆಟಿಂಗ್ ಮ್ಯಾನೇಜರ್, ಫಾರ್ಮಾಸಿಸ್ಟ್‌ಗಳು ಮತ್ತು ವಿದ್ಯಾರ್ಥಿಗಳೇ ಸ್ವಯಂಸೇವಕರಾಗಿರುವ ಈ ಆರ್ಮಿಯು ಈಗಾಗಲೇ ವಿಶ್ವದ 406 ನಗರ ಪ್ರದೇಶಗಳಲ್ಲಿ ಒಂದೂವರೆ ಕೋಟಿಗಿಂತ ಹೆಚ್ಚು ಜನರಿಗೆ ಊಟ ತಲುಪಿಸಿದೆ.

2 ಲಕ್ಷಕ್ಕೂ ಹೆಚ್ಚು ಸದಸ್ಯರಿರುವ ಈ ಆರ್ಮಿ ಆಗಸ್ಟ್ 14, 2014ರಲ್ಲಿ ದೆಹಲಿಯಲ್ಲಿ ಮೊದಲಿಗೆ ಶುರುವಾಯಿತು. ತನ್ನ ಸೇವಾಕಾರ್ಯವನ್ನು ಭಾರತದ ನೂರಕ್ಕೂ ಹೆಚ್ಚು ನಗರಗಳಿಗೆ ವಿಸ್ತರಿಸಿ, ಹಂತಹಂತವಾಗಿ ತನ್ನ ಶಾಖೆಗಳನ್ನು ಹೆಚ್ಚಿಸಿಕೊಂಡು ಹಸಿದವರಿಗೆ ಹೊಟ್ಟೆ ತುಂಬುವ ಅಕ್ಷಯ ಪಾತ್ರೆ ಎನಿಸಿದೆ.

ರಾಹು ಆರ್ಮಿಯ ಸೇವಕರು ದಿನವಿಡೀ ಅಥವಾ ವಾರವಿಡೀ ಕೆಲಸ ಮಾಡಬೇಕಾಗಿಲ್ಲ. ವಾರಕ್ಕೆ ಮೂರು ತಾಸುಗಳ ಸೇವೆ ಸಲ್ಲಿಸಿದರೆ ಸಾಕು. ಆಹಾರ ನೀಡುವುದರೊಂದಿಗೆ ಮಕ್ಕಳಿಗೆ ಶಿಕ್ಷಣದ ಮಹತ್ವವನ್ನು ಮನಗಾಣಿಸಲು ರಾಬಿನ್ ಹುಡ್ ಅಕಾಡೆಮಿ ಕೂಡ ಶುರುವಾಗಿದೆ. ದೆಹಲಿ, ಕೋಲ್ಕತ್ತ, ಜೈಪುರ, ಅಹಮದಾಬಾದ್, ಬೆಂಗಳೂರು, ಹೈದರಾಬಾದ್, ಲಖನೌ ಸೇರಿದಂತೆ ಅನೇಕ ಕಡೆ ತನ್ನ ಶಾಖೆಗಳನ್ನು ವಿಸ್ತರಿಸಿದ್ದು, ತನ್ನ ಧ್ಯೇಯೋದ್ದೇಶಗಳಿಗಾಗಿ ಕೆಲಸ ಮಾಡುವ ಸ್ವಯಂಸೇವಕರಿಗೆ ವಾರ್ಷಿಕ ಎರಡರಿಂದ ಮೂರು ಲಕ್ಷ ಸಂಬಳ ನೀಡುತ್ತಿದೆ.

ಆರ್ಮಿಗೆ ಕಚೇರಿ ಎಂಬುದಿಲ್ಲ. ನಿಗದಿತ ಕೆಲಸಗಾರರೂ ಇಲ್ಲ. ಆಸಕ್ತಿ ಇರುವ ಯಾರು ಬೇಕಾದರೂ ಸ್ವಯಂಸೇವಕರಾಗಿ ದುಡಿಯಬಹುದು. ಹೆಚ್ಚಿನ ವಿವರಗಳು robinhoodarmy.comನಲ್ಲಿ ಲಭ್ಯ.

ಪ್ರತಿಕ್ರಿಯಿಸಿ: feedback@sudha.co.in